ಕರ್ನಾಟಕ ಸರ್ಕಾರ
Government of Karnataka

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬಳ್ಳಾರಿ ವಿಭಾಗ ಕಛೇರಿ, ಬಳ್ಳಾರಿ
Office of the
Deputy Conservator of Forests
Ballari Division Ballari

ರೇಡಿಯೋ ಪಾರ್ಕ್, ಐಟಿಐ ಕಾಲೇಜ್ ಎದುರುಗಡೆ,
ಬಳ್ಳಾರಿ-583102
Radio Park, Opp. ITI College, Ballari
Telephone: 08392-240797
Email: dcfbellaryt@gmail.com

ಸಂಖ್ಯೆ:ಎ7/ಭೂಮಿ/CRFL/ಸಿಆರ್- /2025-26 ದಿನಾಂಕ: 27-01-2026

ಇವರಿಗೆ,
**ಜಿಲ್ಲಾಧಿಕಾರಿಗಳು,**
**ಬಳ್ಳಾರಿ ಜಿಲ್ಲೆ, ಬಳ್ಳಾರಿ.**

ಮಾನ್ಯರೆ

ವಿಷಯ : ಕ್ರೂಢಿಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಿದ್ಧಪಡಿಸಲು ಹಾಗೂ ರಾಜ್ಯದ ಯಾವುದೇ ಅರಣ್ಯ ಪ್ರದೇಶವನ್ನು ಕಂದಾಯ ಇಲಾಖೆಯು ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗೆ ಮಂಜೂರು ಮಾಡಿರುವ ಪ್ರಕರಣಗಳನ್ನು ಪತ್ತೆಹಚ್ಚುವ ವಿಷಯದ ಕುರಿತು ಕಾರ್ಯಾಗಾರವನ್ನು ನೋಡಲ್ ಅಧಿಕಾರಿಗಳು ಆಯೋಜಿಸುವ ಕುರಿತು.

ಉಲ್ಲೇಖ : ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಕಾರ್ಯಯೋಜನೆ), ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: KFD/WP/RFO(DF)/1/2021 ದಿನಾಂಕ: 08-01-2026.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲೇಖಿತ ಪತ್ರದನ್ವಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಕಾರ್ಯಯೋಜನೆ), ಬೆಂಗಳೂರು ಇವರು ಉಲ್ಲೇಖಿತ ಪತ್ರದ ಮೂಲಕ ಎಲ್ಲಾ ನೋಡಲ್ ಅಧಿಕಾರಿಗಳಿಗೆ CRFL ಹಾಗೂ SIT ತಂಡಗಳಿಗೆ ದಿನಾಂಕ: 28-01-2026 ರಂದು ಬೆಳಿಗ್ಗೆ 11.00 ಗಂಟೆಗೆ ಇಂದ 1.00 ಗಂಟೆಯವರೆಗೆ Video Conference ಮೂಲಕ ಕಾರ್ಯಗಾರವನ್ನು ಆಯೋಜಿಸಿರುತ್ತಾರೆ. (ಪತ್ರದ ಪ್ರತಿ ಲಗತ್ತಿಸಿದೆ).

ಅದರನ್ವಯ ಜಿಲ್ಲಾ ಮಟ್ಟದ ತಜ್ಞರ ಸಮಿತಿಯ ಹಾಗೂ ತನಿಖಾ ತಂಡಗಳ ಕಂದಾಯ, ಭೂ ಮಾಪನಾ ಹಾಗೂ ಅರಣ್ಯಾಧಿಕಾರಿಗಳಿಗೆ ಆಯಾ ಸಮಿತಿ / ತಂಡಗಳು ನಿರ್ವಹಿಸಬೇಕಾಗಿರುವ ಕಾರ್ಯಗಳ ಕಾರ್ಯ ವಿಧಾನದ ಕುರಿತು ಸೂಕ್ತ ತರಬೇತಿ ನೀಡಲು ಕಾರ್ಯಗಾರವನ್ನು ಹಮ್ಮಿಕೊಂಡಿರುತ್ತಾರೆ. ದಿನಾಂಕ:28-01-2026 ರಂದು ಬೆಳಿಗ್ಗೆ 11.00 ಗಂಟೆಗೆ ಇಂದ 1.00 ಗಂಟೆಯವರೆಗೆ ಜರುಗಲಿರುವ ಕಾರ್ಯಗಾರವನ್ನು ಆನ್‌ಲೈನ್ (Video Conference) ಮೂಲಕ ನಡೆಸಲಾಗಿರುವ ಪ್ರಯುಕ್ತ ತಮ್ಮ ಅಧೀನ ಅಧಿಕಾರಿ / ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನ ನೀಡಿ ಹಾಗೂ ಸದರಿ ಕಾರ್ಯಗಾರಕ್ಕೆ ಹಾಜರಾಗಿ ಯಶಸ್ವಿಗೊಳಿಸಲು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

**VC Link : https://meet.google.com/fcp-bvtk-ueg**

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹಾಗೂ ನೋಡಲ್ ಅಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ.

1. ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವಿಜಯನಗರ ಮತ್ತು ಕೊಪ್ಪಳ ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಪ್ರತಿಯನ್ನು ಉಪ ನಿರ್ದೇಶಕರು, ಭೂದಾಖಲೆ, ಬಳ್ಳಾರಿ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
4. ಪ್ರತಿಯನ್ನು ವಲಯ ಅರಣ್ಯಾಧಿಕಾರಿಗಳು, ಬಳ್ಳಾರಿ, ಸಿರುಗುಪ್ಪ, ಸಂಡೂರು ಉತ್ತರ ಮತ್ತು ಸಂಡೂರು ದಕ್ಷಿಣ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

Scanned with CamScanner